ಹುಡುಗನನ್ನು ಅತ್ಯಂತ ಕೀಳಾಗಿ ಕಾಣುತ್ತಿದ್ದರು. ಆದರೆ ಗುರುಗಳು ಮಾತ್ರ ಅವರ ನಡುವೆ ಯಾವುದೇ ಭೇದ ತೋರುತ್ತಿರಲಿಲ್ಲ.

ಆ ಆಶ್ರಮದಲ್ಲೊಂದು ಗೋಶಾಲೆ ಇತ್ತು. ಆ ಗೋವುಗಳ ಸೇವೆಯನ್ನೂ ವಿದ್ಯಾರ್ಥಿಗಳೇ ನೋಡಿಕೊಳ್ಳುತ್ತಿದ್ದರು. ಆ ಗೋಶಾಲೆಯಲ್ಲಿ ಒಂದು ಭಯಂಕರ ಆಕಳು ಇತ್ತು. ಎದುರು ಬಂದವರನ್ನು ಇರಿಯಲು ಬರುತ್ತಿತ್ತು. ಸ್ವತಃ ಮಂದಸ್ಮಿತ ಮಹರ್ಷಿಗಳೇ ಅದನ್ನು ಪಳಗಿಸಲು ಹೋಗಿ ಸೋತುಹೋಗಿದ್ದರು. ಉಪವಾಸವಿಟ್ಟರೂ ಆ ಹಸು ಪಳಗಲಿಲ್ಲ. ಸದಾ ಭುಸುಗುಟ್ಟುತ್ತ ಕಂಡವರ ಮೇಲೆ ಏರಿ ಬರುತ್ತಿತ್ತು. ಯಾರೂ ಅದರ ಹಾಲನ್ನು ಕರೆಯುತ್ತಿರಲಿಲ್ಲ.

ಪ್ರತಿನಿತ್ಯ ಸಂಜೆಹೊತ್ತು ಮಂದಸ್ಮಿತ ಮಹರ್ಷಿಗಳ ಪ್ರವಚನಕ್ಕೆ ಸುತ್ತಲಿನ ಗ್ರಾಮದ ಜನರು ಬರುತ್ತಿದ್ದರು. ಒಮ್ಮೆ 'ಪ್ರೀತಿ–ಮಮಕಾರಗಳಿಂದ ನಾವು ಎಂಥ ವ್ಯಕ್ತಿಯನ್ನಾದರೂ ಗೆಲ್ಲಬಹುದು. ನಿಷ್ಕಳಂಕ ಪ್ರೀತಿಗೆ ಸೋಲದ ಜೀವಿಗಳೇ ಇಲ್ಲ...' ಎನ್ನುವ ಅವರ ಪ್ರವಚನದ ಮಾತುಗಳು ಬಾಲಕೃಷ್ಣನ ಮನಸ್ಸಿಗೆ ನಾಟಿದವು. 'ಗುರುಗಳು ಹೇಳುತ್ತಿದ್ದಾರೆಂದರೆ ಅದು ನಿಜವೇ ಇರಬೇಕು' ಅಂದುಕೊಂಡ.

ಹೀಗೇ ಕೆಲದಿನಗಳು ಉರುಳಿದವು. ಅದು ಶ್ರಾವಣಮಾಸ. ಗುರುಗಳು ಶಿಷ್ಯರ ಸಮೇತರಾಗಿ ರಾಜನ ಆಸ್ಥಾನದಲ್ಲಿ ಪ್ರವಚನ ನೀಡಲು ಹೊರಟರು. ಹೋಗುವಾಗ ಆಶ್ರಮ ಹಾಗೂ ಹಸುಗಳನ್ನು ನೋಡಿಕೊಳ್ಳಲು ಒಬ್ಬ ಶಿಷ್ಯನನ್ನು ಬಿಟ್ಟು ಹೋಗಬೇಕಿತ್ತು. ಈ ವರ್ಷ ಬಾಲಕೃಷ್ಣನನ್ನು ಬಿಟ್ಟು ಹೋಗಲು ಗುರುಗಳು ನಿರ್ಧರಿಸಿದರು. ಬಾಲಕೃಷ್ಣ ಒಪ್ಪಿಕೊಂಡ. ಶಿಷ್ಯ ಸಮೂಹದೊಂದಿಗೆ ಮಹರ್ಷಿಗಳ ಪಯಣ ರಾಜಪುರದತ್ತ ಹೊರಟಿತು. ಮಹರ್ಷಿಗಳ ಮನಸ್ಸು ಮಾತ್ರ ಆಶ್ರಮದತ್ತ ಇತ್ತು. 'ಪಾಪ ಪುಟ್ಟ ಬಾಲಕ ಒಬ್ಬನೇ ಆಶ್ರಮದಲ್ಲಿ...' ಎಂದು ಯೋಚಿಸುತ್ತಿರುವಾಗ, 'ಗುರುಗಳೇ, ಬಾಲಕೃಷ್ಣನಿಗೆ ಆ ದುಷ್ಟ ಹಸುವಿನತ್ತ ಹೋಗಬಾರದೆಂದು ಹೇಳಬೇಕಿತ್ತು...' ಎಂದು ಒಬ್ಬ ಶಿಷ್ಯ ನೆನಪಿಸಿದ. ಮಹರ್ಷಿಗಳು ಒಮ್ಮೆಲೆ ಗಾಬರಿಯಾದರು. ಆ ಮಾತು ಹೇಳಲು ಗುರುಗಳು ಮರೆತಿದ್ದರು.

ಆಸ್ಥಾನದಲ್ಲಿ ನಾಲ್ಕು ದಿನಗಳ ಪ್ರವಚನ ವೈಭವದಿಂದ ನೆರವೇರಿತಾದರೂ ಗುರುಗಳ ಮನಸ್ಸು ಬಾಲಕೃಷ್ಣನಿಗಾಗಿ ಪರಿತಪಿಸುತ್ತಿತ್ತು. ರಾಜರು ಮೆಚ್ಚಿಕೊಟ್ಟ ಮುತ್ತು ರತ್ನಗಳನ್ನು, ದವಸ ಧಾನ್ಯಗಳನ್ನು ಹೊತ್ತು ಶಿಷ್ಯರೊಂದಿಗೆ ಆಶ್ರಮದತ್ತ ಪ್ರಯಾಣಿಸಿದರು. ಪುಟ್ಟ ಬಾಲಕೃಷ್ಣ ಮತ್ತು ಆ ಕ್ರೂರ ಹಸುವಿನ ಬಗ್ಗೆ ಆಲೋಚಿಸುತ್ತಲೇ ಗುರುಗಳು ಆಶ್ರಮದ ಒಳಗೆ ಕಾಲಿಟ್ಟರು. ಅವರಿಗೆ ಆಶ್ಚರ್ಯ ಕಾದಿತ್ತು. ಬಾಲಕೃಷ್ಣ ಆನೆಗಾತ್ರದ ಹಸುವಿನ ಮೈ ಉಜ್ಜಿ ಹಾಲು ಕರೆಯುತ್ತಿದ್ದ! ಆ ಹಸು ಪ್ರತಿರೋಧವಿಲ್ಲದೇ ಬಾಲಕೃಷ್ಣನಿಗೆ ಹಾಲು ನೀಡುತ್ತಿತ್ತು.

'ಇದೇನು ಬಾಲಕೃಷ್ಣ! ಇದೊಂದು ದುಷ್ಟ ಹಸು. ಅದರ ಹಾಲನ್ನು ಕರೆಯುತ್ತಿರುವಿಯಲ್ಲ?' ಎಂದರು ಆಶ್ಚರ್ಯದಿಂದ. ಆಗ ಬಾಲಕೃಷ್ಣ, 'ನೀವೇ ಹೇಳಿರಲಿಲ್ಲವೇ ಗುರುಗಳೇ. ಭಕ್ತರ ಪ್ರೀತಿ ಮತ್ತು ಅಂತಃಕರಣಗಳಿಗೆ ಆ ಭಗವಂತನೇ ಸೋಲುತ್ತಾನೆಂದು? ಈ ಹಸು ನಮ್ಮ ಪ್ರೀತಿಗೆ ಸೋಲಲಾರದೆ?' ನೀವು ಹೇಳುವುದೆಲ್ಲ ಸತ್ಯವಾಗಿರುತ್ತದೆ ಎಂದು ನಾನು ನಂಬಿದ್ದೆ. ಅದು ಇಲ್ಲಿ ನಿಜವಾಗಿದೆ.' ಬಾಲಕೃಷ್ಣನ ಮಾತು ಕೇಳಿ ಗುರುಗಳು ದಂಗಾದರು. 'ಮಗು, ಗುರುಗಳ ಮೇಲೆ ನೀನು ಇಟ್ಟ ನಂಬಿಕೆ ಇದು. ನಾನು ನನ್ನ ಜೀವನದ ತುಂಬ ಪ್ರೀತಿ, ಮಮತೆ, ಅಂತಃಕರಣಗಳ ಬಗ್ಗೆ ಸಾಕಷ್ಟು ಪ್ರವಚನಗಳನ್ನು ನೀಡುತ್ತ ಬಂದೆ. ಆದರೆ ಎಂದೂ ನಾನು ಅವನ್ನು ಅನುಭವಿಸಲಿಲ್ಲ. ಆದರೆ ಬಾಲಕೃಷ್ಣ ನಾನು ಹೇಳಿಕೊಟ್ಟ ನಿಷ್ಕಲ್ಮಶ ಪ್ರೀತಿಯ ಮೇಲೆ ನೀನು ನಂಬಿಕೆ ಇಟ್ಟಿದ್ದರಿಂದ ಒಂದು ದುಷ್ಟ ಹಸುವನ್ನು ಪಳಗಿಸಿದೆ. ಅದರ ಪ್ರೀತಿ ಗೆದ್ದೆ. ನೀನು ನನ್ನ ಶಿಷ್ಯನಲ್ಲ, ನಾನೇ ನಿನ್ನ ಶಿಷ್ಯ..." ಎಂದು ಮಂದಸ್ಮಿತ ಮಹರ್ಷಿಗಳು ಬಾಲಕೃಷ್ಣನಿಗೆ ಬಾಗಿ ವಂದಿಸಿದರು.

❖